ಹೇಳಿದ್ದೇನೆ. ಯಾವುದೇ ವಿಧವಾದ ಕಮಿಷನ್ ಅನ್ನು ಹಾಕಿ ವುದಿಲ್ಲ. ಈ ದಳ್ಳಾಳಿಗಳ ದುರಾಡಳಿತ ವನ್ನು ಈ ಸದನ ಖಂಡಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದಕ್ಕೆ ತಾವೆಲ್ಲರೂ ಸಹಕಾರ ವನ್ನು ಕೊಡಬೇಕು. ಈ ಬಗ್ಗೆ ಯಾವುದೇ ವಿಧವಾದ ಒತ್ತಡ ಬಂದರೂ ಕೂಡ ಮಣಿಯುವುದಿಲ್ಲ ವೆಂದು ಭರವಸೆ ಕೊಡುತ್ತೇನೆ. ಬೆಂಗಳೂರಿನ ಗ್ರಾಹಕರಿಗೆ ತೊಂದರೆಯಾಗಬಾರದು ಎನ್ನುವ ದೃಷ್ಟಿ ಯಿಂದ ೫೦ ಅಂಗಡಿಗಳನ್ನು ತೆರೆದಿದ್ದೇವೆ. ಆ ಅಂಗಡಿಗಳು ಬೆಳಿಗ್ಗೆ ೮ ಗಂಟೆಯಿಂದ ಸಾಯಂಕಾಲ ೮ ಗಂಟೆಯವರೆಗೂ ವ್ಯಾಪಾರವನ್ನು ಮಾಡುವ ಹಾಗೆ ಇನ್ಸ್‌ಟ್ರಕ್ಷನ್‌ನ್ನು ಕೊಟ್ಟಿದ್ದೇನೆ. ಹಣ್ಣು ಮತ್ತು ತರಕಾರಿಗಳನ್ನು ವ್ಯಾನ್‌ಗಳಲ್ಲಿ ತೆಗೆದುಕೊಂಡು ಹೋಗಿ ಎಲ್ಲಾ ಬಡಾವಣೆಗಳಲ್ಲೂ ಮಾರಾಟ ಮಾಡುವ ವ್ಯವಸ್ಥೆಯನ್ನು ಮಾಡಿದ್ದೇನೆ. ಯಾವ ರೀತಿಯಲ್ಲಿ ಹಣ್ಣು ಮತ್ತು ತರಕಾರಿಯನ್ನು ಕೊಂಡುಕೊಳ್ಳಬೇಕು ಎಂಬುದರ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಕೊಡುವಂತೆ ಆದೇಶ ನೀ

not say anything about violation of rules and procedures in the sclection of candidates. They also do not mention anything regarding deserving candidates being put to lot of hardships. They have also not stated that they have resigned from the Committee. They have only objected to the manner in which the process of selection has been done stating that they were not finally consulted about the list of candidates.

The Selection Committee constituted for seletcion of candidates for admission to post-graduate coueses in Modical Colleges is only to Scrutinise the certificates and other documents of the candidates and not to award marks for the intorview. After scrutinising the documents in the Committee, the final list of sclected candidates was to be prepared based only or the marks obtined in M,B B.S..

On receipt of the representations, the matter has been enquired into with the Chairman of the Committee i.e., the Director of Medical Education. It is ascertained that nothing illegal has been done as mentioned by the Hon'ble Member. Only the procedure followed in conducting the proceedings of the Committee objected to by two of the members. The selection as such has been done as per the rules issued in that behalf. There is no need for instituting any further enquiry in this behalf. Care will be taken to see that there will not be any procedural irregularities.

11 ಕೊಡಗಿನಲ್ಲಿ ಏಲಕ್ಕಿ ಗೇಣಿ ಮಲೆಗಳನ್ನು 21 ವರ್ಷ ಗೇಣಿಗೆ ಕೊಡುವುದು

ಶ್ರಿ ಡಿ. ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ, ಕೊಡಗಿನ ನಿವಾಸಿಗಳ ಪೈಕಿ ಬಹಳಷ್ಟು ಮಂದಿ 2ನೇ ಮಹಾಯುದ್ಧದಲ್ಲಿ ಸೇವೆ ಸಲ್ಲಿಸಿದ್ದಕ್ಕೆ ಆಗಿನ ಸರಕಾರದ ರಿಲೀಸ್ ಆರ್ಡರ್ ಪ್ರಕಾರ ಅವರು ಕೊಡಗಿಗೆ ಬಂದು ನಿವೃತ್ತ ವೇತನ ಅಥವಾ ವಿಶ್ರಾಂತಿ ವೇತನಗಳಿಲ್ಲದೆ ಜೀವಿಸುತ್ತಿದ್ದಾರೆ.

ಕೊಡಗಿನ ಘನ ಸರ್ಕಾರದವರು ಅವರುಗಳ ಕಷ್ಟವನ್ನು ನೋಡಿ ಆಗಿನ ಸರಕಾರ ಅರಣ್ಯ ಇಲಾಖೆಯಿಂದ ತಲಾ 2½ ರಿಂದ ೧೦೦ ಎಕರೆ ಜಮೀನನ್ನು 21 ವರ್ಷಗಳ ಅವಧಿಗೆ ಏಲಕ್ಕಿ ಕೃಷಿ ಮಾಡಲು ಗೇಣಿ ರೂಪದಲ್ಲಿ ನೀಡಿದ್ದು, ಕನಿಷ್ಟ ರೂಪದ ಕಂದಾಯವನ್ನು ವಸೂಲು ಮಾಡುತ್ತಿದ್ದರು. ಅವರು ೩೦ ವರ್ಷಗಳಿಂದ ವ್ಯವಸಾಯ ಮಾಡಿಕೊಂಡು ತಮ್ಮ ಸಂಸಾರವನ್ನು ನಡೆಸಿಕೊಂಡು ಬರುತ್ತಿದ್ದರು. ಈಗ ೧೯೮೦ ರಿಂದ ಅವರ ಗೇಣಿ ಅವಧಿ 21 ವರ್ಷ ಮುಗಿದಿದ್ದು ಈಗಾಗಲೇ ಸರ್ಕಾರದ ವಶಕ್ಕೆ ಬಿಡಬೇಕೆಂದು ತೀರ್ಮಾನವಾಗಿರುವುದು ಅವರ ಗಮನಕ್ಕೆ ಬಂದಿರುವುದಿಲ್ಲ. ಅವರಂಗಳು ಅಂದರೆ ಸೇನೆಯಲ್ಲಿ ಸೇವೆ ಸಲ್ಲಿಸಿದ ಬಳಿ ಮಂದಿ ಅಂದಾಜು ೪೦೦ ಎಕರೆ ಅರಣ್ಯ ಪ್ರದೇಶದಲ್ಲಿ ಏಲಕ್ಕಿ ಕೃಷಿ ಮಾಡಿಕೊಂಡಿರುತ್ತಾರೆ ಮತ್ತು ಈ ಗೇಣಿ ಮಲೆಗಳನ್ನು ಬಿಟ್ಟು ಜೀವಿಸಲು ಅವರುಗಳಿಗೆ ಬೇರೆ ಮಾರ್ಗ ವಿಲ್ಲದಂತಾಗಿದೆ. ಈ ಬಗ್ಗೆ ಅವರುಗಳು ಸಂಬಂಧಪಟ್ಟ ಇಲಾಖೆಯಲ್ಲಿ ಮನವಿ ಮಾಡಿಕೊಂಡಾರು ಪ್ರಯೋಜನವಾಗಲಿಲ್ಲ. ಮತ್ತು ಇಲಾಖೆಯ ಅಧಿಕಾರಿಗಳು ಗೇಣಿ ಮಲೆಗಳಿಂದ ಫಸಲು ಕಾಯ್ಕುವಲ್ಲಿ ತೊಂದರೆ ಕೊಡುತ್ತಿರುವುದಲ್ಲದೆ ಸರ್ಕಾರಕ್ಕೆ ಪಾವತಿ ಮಾಡುವ ಕಂದಾಯವನ್ನು ಸ್ವೀಕರಿಸುತ್ತಿಲ್ಲ. ಈ ರೀತಿಯ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಅವರು ಸಿಲುಕಿದ್ದಾರೆ. ಕಳೆದ ವರ್ಷ ಏಲಕ್ಕಿ ಗೇಣಿ ಮರಗಳನ್ನು ಪುನಃ ಗೇಣಿದಾರರಿಗೆ 21 ವರ್ಷಕ್ಕೆ ಗೇಣಿಗೆ ಕೊಡಂತ್ತೇವೆಂದು ಈ ಸದನದಲ್ಲಿ ಆಗಿನ ಅರಣ್ಯ ಮಂತ್ರಿ